
# ಭೂಷಣಪ್ರಾಯ ಸಾಧಕ

ಶಾಂತಿಭೂಷಣ್. ಭಾರತೀಯ ಕಾನೂನು ಚರಿತ್ರೆಯಲ್ಲಿ ಅಚ್ಚಳಿಯದೆ ಉಳಿಯಬಲ್ಲ ಬಹುದೊಡ್ಡ ಹೆಸರು. ಹೆಸರಿನಲ್ಲಿ 'ಶಾಂತಿ' ಇದ್ದರೂ ಕೋರ್ಟ್ ರೂಮ್‌ನಲ್ಲಿ ವಾದಕ್ಕೆ ನಿಂತರೆ ಎದುರಾಳಿಗಳ ಎದೆಯಲ್ಲಿ ಅಶಾಂತಿಯ ಅಲೆ ಏಳುವಂತೆ, ದೇಶದ ಭ್ರಷ್ಟ ವ್ಯವಸ್ಥೆಯಲ್ಲಿ ಅಲ್ಲೋಲ–ಕಲ್ಲೋಲ ಉಂಟು ಮಾಡುವಂತೆ ವಾದ ಮಾಡಬಲ್ಲ ತಾಕತ್ತಿದ್ದ ವಕೀಲ. ಮೊರಾರ್ಜಿ ದೇಸಾಯಿ ಅವರ ನೇತೃತ್ವದ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದ (1977–1979) ಈ ಹಿರಿಯ ವಕೀಲ, ನ್ಯಾಯಾಂಗದ ಉತ್ತರದಾಯಿತ್ವಕ್ಕಾಗಿ, ಆ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ತರುವುದಕ್ಕಾಗಿ ಬದುಕಿನುದ್ದಕ್ಕೂ ಹೋರಾಟ ನಡೆಸಿದವರು. ತಂದೆಯ ಹಾದಿಯಲ್ಲೇ ನಡೆದಿರುವ ಅವರ ಪುತ್ರ ಪ್ರಶಾಂತ್ ಭೂಷಣ್ ಕೂಡ ನ್ಯಾಯಾಂಗದ ಉತ್ತರದಾಯಿತ್ವಕ್ಕಾಗಿ ಧ್ವನಿ ಎತ್ತುತ್ತಿರುವರು. ನಾಗರಿಕ ಹಕ್ಕುಗಳಿಗಾಗಿ ಕಾನೂನು ಹೋರಾಟ ನಡೆಸುತ್ತಿರುವರು.

'ಘನತೆ, ಸಮಗ್ರತೆ, ಧೈರ್ಯ, ಮಹತ್ವಾಕಾಂಕ್ಷೆ, ಸ್ಪರ್ಧಾತ್ಮಕತೆಯ ಮೌಲ್ಯಗಳನ್ನು ಯಾರೇ ಆದರೂ ಯಶಸ್ಸಿನೊಂದಿಗೆ ಸಮ್ಮಿಳಿತಗೊಳಿಸಬಹುದು' ಎನ್ನುವುದು ಡಾನ್ ಬ್ರಾಡ್ಮನ್ ಅವರ ಧ್ಯೇಯವಾಕ್ಯ. ಶಾಂತಿಭೂಷಣ್ ಅವರು ಈ ಹೇಳಿಕೆಯನ್ನು ತಮ್ಮ ಆತ್ಮಕಥೆ 'ಕೋರ್ಟಿಂಗ್ ಡೆಸ್ಟಿನಿ'ಯಲ್ಲಿ ಉಲ್ಲೇಖಿಸಿದ್ದು ಮಾತ್ರವಲ್ಲ, ಅದರಂತೆ ನಡೆದವರು ಕೂಡ.

ನ್ಯಾಯಕ್ಕಾಗಿ ಪಟ್ಟುಬಿಡದೆ ಹೋರಾಟ ನಡೆಸುವ ಶಾಂತಿ ಭೂಷಣ್ (ನ. 11, 1925 – ಜ. 31, 2023) ಅವರ ಮನೋಭಾವ ಢಾಳಾಗಿ ಎದ್ದು ಕಂಡಿದ್ದು ಪ್ರಧಾನ ಮಂತ್ರಿಯಾಗಿದ್ದ ಇಂದಿರಾ ಗಾಂಧಿ ಅವರ ವಿರುದ್ಧ ಅವರು ನಡೆಸಿದ ಕಾನೂನು ಹೋರಾಟದ ಮೂಲಕ. ರಾಯ್‌ಬರೇಲಿ ಕ್ಷೇತ್ರದಿಂದ ಭಾರೀ ಅಂತರದ ಮೂಲಕ ಗೆದ್ದು ಬಂದ ಇಂದಿರಾ ಅವರ ವಿರುದ್ಧ, ಅವರ ಪ್ರತಿಸ್ಪರ್ಧಿಯಾಗಿದ್ದ ಜನಸಂಘದ ರಾಮ್ ನಾರಾಯಣ್ ಅವರು ಚುನಾವಣಾ ಅಕ್ರಮ ಎಸಗಿದ ಆರೋಪ ಹೊರಿಸಿ ಕೋರ್ಟ್ ಮೆಟ್ಟಿಲೇರಿದ್ದರು. ರಾಮ್ ನಾರಾಯಣ್ ಪರ ವಕಾಲತ್ತು ವಹಿಸಿಕೊಂಡು ನಿಂತ ಭೂಷಣ್, ವ್ಯಾಪಕವಾದ ಚುನಾವಣಾ ಅಕ್ರಮಗಳ ಮೂಲಕ ಗೆದ್ದುಬಂದಿರುವ ಕಾರಣ ಇಂದಿರಾ ಅವರ ಲೋಕಸಭಾ ಸದಸ್ಯತ್ವವನ್ನು ರದ್ದುಗೊಳಿಸಬೇಕೆಂದು ವಾದ ಮಂಡಿಸಿದರು. ಅವರ ಸಮರ್ಥ ವಾದಕ್ಕೆ



■ ಪ್ರವೀಣ ಕುಲಕರ್ಣಿ

ತಲೆದೂಗಿದ ಅಲಹಾಬಾದ್ ಹೈಕೋರ್ಟ್, ಇಂದಿರಾ ಅವರ ಸದಸ್ಯತ್ವವನ್ನು ರದ್ದುಗೊಳಿಸುವ, ಆರು ವರ್ಷಗಳವರೆಗೆ ಅವರು ಸ್ಪರ್ಧಿಸದಂತೆ ನಿರ್ಬಂಧಿಸುವ ಮಹತ್ವದ ತೀರ್ಪು ನೀಡಿತು. ಈ ತೀರ್ಪು ದೇಶದಾದ್ಯಂತ ಅಲ್ಲೋಲ–ಕಲ್ಲೋಲ ಎನ್ನುವಂತಹ ವಾತಾವರಣವನ್ನು ಸೃಷ್ಟಿಸಿತ್ತು. ಮುಂದೆ ಸುಪ್ರೀಂ ಕೋರ್ಟ್‌ನಲ್ಲಿ ಈ ತೀರ್ಪಿಗೆ ತಡೆಯಾಜ್ಞೆ ಸಿಕ್ಕಿತಾದರೂ ಈ ಪ್ರಕರಣವೇ ಮುಂದೆ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಗಲು ಕಾರಣವಾಯಿತು.

'ಯಾವ ರಾಜಕೀಯ ನೇತಾರನೇ ಆಗಿರಲಿ, ಕಾನೂನಿಗೆ ಅತೀತನಲ್ಲ. ಯಾವುದೇ ದೊಡ್ಡ ನಾಯಕ ಅಧಿಕಾರದಿಂದ ನಿರ್ಗಮಿಸುವ ಪರಿಸ್ಥಿತಿ ಉದ್ಭವಿಸಿದಾಗ, ದೇಶ ತನ್ನ ಹೊಸ ನೇತಾರನನ್ನು ಸಹಜವಾಗಿಯೇ ಆಯ್ಕೆ ಮಾಡಿಕೊಳ್ಳುತ್ತದೆ' ಎನ್ನುವ ಶಾಂತಿ ಭೂಷಣ್ ಅವರ ವಾದ ಎಲ್ಲರ ಗಮನಸೆಳೆದಿತ್ತು.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮಾಡಲಾದ 39ನೇ ಸಾಂವಿಧಾನಿಕ ತಿದ್ದುಪಡಿಯನ್ನು ರದ್ದುಗೊಳಿಸುವಲ್ಲಿಯೂ ಶಾಂತಿ ಭೂಷಣ್ ಅವರ ಸಮರ್ಥ ವಾದ ನೆರವಿಗೆ ಬಂದಿತ್ತು. 'ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಮತ್ತು ಲೋಕಸಭೆಯ ಸ್ಪೀಕರ್ ಅವರ ಆಯ್ಕೆಯು ಭಾರತೀಯ ಕೋರ್ಟ್‌ಗಳ ವಿಚಾರಣೆಯಿಂದ ಅತೀತವಾಗಿವೆ' ಎನ್ನುವುದು ಈ ತಿದ್ದುಪಡಿಯಾಗಿತ್ತು. 'ಪ್ರತೀ ಸಂವಿಧಾನದ ಮೂಲ ಅಸ್ಮಿತೆಯನ್ನು ಕಾಪಾಡುವಲ್ಲಿ ಅದರ ವಿನ್ಯಾಸವನ್ನು ಕಾಯ್ದುಕೊಳ್ಳುವುದು ಅಗತ್ಯ. ನಮ್ಮ ಸಂವಿಧಾನದ ಅನನ್ಯತೆಯನ್ನೂ ಹಾಗೇ ಉಳಿಸಿಕೊಳ್ಳಲೇಬೇಕು. ಹೀಗಾಗಿ ಅದಕ್ಕೆ ವ್ಯತಿರಿಕ್ತವಾದ ತಿದ್ದುಪಡಿ ರದ್ದಾಗಬೇಕು' ಎಂದು ಭೂಷಣ್ ವಾದಿಸಿದ್ದರು. 'ಪ್ರಜಾಪ್ರಭುತ್ವವಾದಿ ಸಂವಿಧಾನವನ್ನು ಸರ್ವಾಧಿಕಾರಿ ಸಂವಿಧಾನವನ್ನಾಗಿ ಪರಿವರ್ತಿಸುವುದಾದರೆ, ದೇಶದ ಚುಕ್ಕಾಣಿಯನ್ನು ಸರ್ವಾಧಿಕಾರಿ ಕೈಗೆ ಕೊಟ್ಟು, ನಿನ್ನ ಉತ್ತರಾಧಿಕಾರಿಯನ್ನು ನೀನೇ ನೇಮಿಸು ಎನ್ನುವುದಾದರೆ ಅದನ್ನು ಸಂವಿಧಾನಕ್ಕೆ ಮಾಡಲಾದ ತಿದ್ದುಪಡಿ ಎಂದು ಪರಿಗಣಿಸಲಾಗದು' ಎಂದು ಖಂಡತುಂಡವಾಗಿ ಹೇಳಿದ್ದರು.

ಇಂತಹ ಶಾಂತಿ ಭೂಷಣ್, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಮುಂಜಾಗ್ರತಾ ಕ್ರಮವಾಗಿ ವಿರೋಧಪಕ್ಷದ ನಾಯಕರ ಬಂಧನಕ್ಕಾಗಿ ಕೈಗೊಂಡ ಕಾನೂನು ಕ್ರಮವನ್ನು ಸಮರ್ಥಿಸಿಕೊಂಡಿದ್ದರು. ಈ ಪ್ರಕರಣದಲ್ಲಿ ಅವರ ಪ್ರಮುಖ ವಾದವೇನಾಗಿತ್ತೆಂದರೆ, 'ನೆಲದ ಕಾನೂನು ಯಾವಾಗಲೂ ನಾಗರಿಕರ ಸ್ವಾತಂತ್ರ್ಯವನ್ನು ರಕ್ಷಿಸುತ್ತದೆ. ಆದರೆ, ಅವರು ಕಾನೂನು ಪ್ರಕಾರ ನಡೆದಾಗ ಮಾತ್ರ ಮುಕ್ತ ಹಾಗೂ ಸ್ವತಂತ್ರವಾಗಿ ಬದುಕುವ ಹಕ್ಕನ್ನು ಪಡೆದುಕೊಳ್ಳುತ್ತಾರೆ'.

ಮೊದಲು ಕಾಂಗ್ರೆಸ್‌ನಲ್ಲಿ ಗುರ್ತಿಸಿಕೊಂಡಿದ್ದ ಅವರು, ಬಳಿಕ ಜನತಾ ಪಕ್ಷದ ಒಡನಾಡಿಯಾಗಿದ್ದರು. ನಂತರ ಬಿಜೆಪಿಗೂ ಸೇರಿದ್ದರು. ಬಾಳ ಸಂಧ್ಯಾಕಾಲದಲ್ಲಿ ಎಎಪಿ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಭಿನ್ನ ಪಕ್ಷಗಳೊಂದಿಗೆ ಕೆಲಸ ಮಾಡಿದರೂ ತಮ್ಮ ವ್ಯಕ್ತಿತ್ವವನ್ನು ಯಾವ ಸಿದ್ಧಾಂತದ ಗುಲಾಮಿತನಕ್ಕೆ ಒಡ್ಡದೆ ಕಾಪಾಡಿಕೊಂಡಿದ್ದರು. ಶಾಂತಿ ಭೂಷಣ್ ಅವರ ಮಹತ್ವ ಎದ್ದು ಕಾಣುವುದೇ ಇಂತಹ ಹೆಗ್ಗುರುತುಗಳಲ್ಲಿ. ಭಾರತೀಯ ಕಾನೂನು ವಲಯದಲ್ಲಿ ಮಾತ್ರವಲ್ಲದೆ ಸಾಮಾಜಿಕ ವಲಯಕ್ಕೂ ಭೂಷಣಪ್ರಾಯರಾಗಿದ್ದ ಅವರು, ತಮ್ಮ ಅಗಲಿಕೆಯಿಂದ ಶೂನ್ಯ ಸೃಷ್ಟಿಯಾಗಬಾರದೆಂದೇ ಇರಬೇಕು, ಮಗ ಪ್ರಶಾಂತ್ ಭೂಷಣ್ ಅವರನ್ನು ತಮ್ಮಂತೆಯೇ ತಯಾರು ಮಾಡಿರುವುದು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65